
# ಮಂ. ಗೋವಿಂದಪೈ



'ಮಂಕುತಿಮ್ಮನ ಕಗ್ಗ'ದ ಹಾಗೆಯೇ 'ಗೊಲ್ಗೊಥಾ' ಮುದ್ರಣ ಮಾಡುವಾಗ ನನಗೆ ಗೋವಿಂದ ಪೈಗಳವರ ನೆನಪು. ಡಿವಿಜಿಯವರ ಸಮಗ್ರ ಕೃತಿಯ ಪ್ರಕಟಣೆಯ ಹಾಗೆಯೇ ಪೈಗಳವರ ಎಲ್ಲ ಪುಸ್ತಕಗಳ ಪ್ರಕಟಣೆಗಳನ್ನೂ ಕಾವ್ಯಾಲಯದವರೇ ಮಾಡುತ್ತ ಇದ್ದರು.

ಆದರೆ ಒಂದು ವ್ಯತ್ಯಾಸ.

ಡಿವಿಜಿಯವರನ್ನು ಭೇಟಿ ಮಾಡುವ ಯೋಗ; ಪೈಗಳವರದ್ದು ಹಳೆಯ ನೆನಪು ಮಾತ್ರ ಅಷ್ಟೇ.

ನಾನು ಬರೆವಣಿಗೆ ಪ್ರಾರಂಭಿಸಿದಾಗ ಒಬ್ಬರು ದೊಡ್ಡ ಸಾಹಿತಿಗಳಿಗೆ ಕಾಗದ ಬರೆದು ಅವರ ಅಭಿಪ್ರಾಯ ಕೇಳಿದ್ದು ಗೋವಿಂದ ಪೈಗಳಿಗೇ.

ಮೊದಲು ನಾನು ಬರೆದದ್ದು ಗದ್ಯ ಅಲ್ಲ; ಪದ್ಯ. ಆಗ ಒಂದಿಷ್ಟು 'ಗೀತೆಗಳು' ಎಂದು ಬರೆದು ಪೈಗಳ ಅವಗಾಹನೆಗೆ ಕಳಿಸಿಕೊಟ್ಟಿದ್ದೆ. ಅವರು ಅವುಗಳನ್ನು ಓದಿ, ತಿದ್ದಿ 'ತುಂಬಾ ದೋಷಗಳಿವೆ' ಎಂದು ಬರೆದಿದ್ದರು. ಅಷ್ಟೆ ಅಲ್ಲ, ನಿರಾಶರಾಗಬೇಡಿ, ಬೊಗಳಿ ಬೊಗಳಿ ರಾಗ, ಬರೆದು ಬರೆದು ಕಾವ್ಯ. ಮುಂದುವರೆಸಿ' ಎಂದು ಬರೆದಿದ್ದರು.

ಪದ್ಯ, ನನ್ನ ಜಾಯಮಾನಕ್ಕೆ ಒಗ್ಗಲಿಲ್ಲ. ಬಿಟ್ಟೆ, ಆಮೇಲೆ ಗದ್ಯಕ್ಕೆ ಕೈಹಾಕಿದೆ.

ಮದರಾಸಿನಿಂದ ಹಿಂದಿರುಗಿದ ಮೇಲೆ ಒಂದೆರೆಡು ವರುಷಗಳು ನಾನು ನಿರುದ್ಯೋಗಿ ಆಗಿದ್ದೆ. ಊರೂರು ಸುತ್ತಾಡಿಕೊಂಡಿದ್ದೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಗೂ ಹೋಗಿದ್ದೆ.

ಈಗ ಗೋವಿಂದ ಪೈಗಳವರನ್ನು ನೋಡಬೇಕು ಎಂದು ಮನಸ್ಸಾಯಿತು. ಹಿಂದೆ ಅವರೊಂದಿಗೆ ಪತ್ರ ವ್ಯವಹಾರ ನಡೆದಿತ್ತಲ್ಲ.

ಮಂಗಳೂರಿಂದ ಮಂಜೇಶ್ವರ ಕೇವಲ ಹದಿಮೂರು ಮೈಲಿಗಳು ಮಾತ್ರ ಅಷ್ಟೇ.

ಪೈಗಳವರದು ಹಳೆಯ ಕಾಲದ ಭಾರೀ ಮನೆ. ನಾನು ಅವರ ಮನೆಗೆ ಹೋದಾಗ, ಅವರು ಮನೆಯಲ್ಲಿ ಇರಲಿಲ್ಲ. ಕೆಲವು ನಿಮಿಷಗಳು ಕಳೆದು ಬಂದರು.

ನಾನು ನನ್ನ ಪರಿಚಯವನ್ನು ಹೇಳಿಕೊಂಡೆ. 'ಮದರಾಸಿನಲ್ಲಿದ್ದಾಗ ನನ್ನ 'ಗೀತೆಗಳು' ಕಳಿಸಿದ್ದೆ. ತಾವು ಓದಿ ಅಭಿಪ್ರಾಯ ಸೂಚಿಸಿದಿರಿ' ...ಹೀಗೆ.

'ಹೌದು ಹೌದು ಈಗೇನು ಮಾಡಿಕೊಂಡಿದ್ದೀರಿ?'

ಆತ್ಮೀಯತೆಯಿಂದ ವಿಚಾರಿಸಿದರು.

ಬಳಿಕ ಪೈಗಳವರು ನನ್ನ ಊರು, ಊರಿಗೆ ಆ ಹೆಸರು ಯಾಕೆ ಬಂತು? ಇತ್ಯಾದಿ ಪ್ರಶ್ನೆಗಳನ್ನು ಕೇಳತೊಡಗಿದರು. ನನ್ನ ಊರು,